ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **238/2013**

ಪಿ.ಡಬ್ಲ್ಯೂಃ **04**

ಸಿ.ಡಬ್ಲ್ಯೂಃ **01**

| | |
|---|---|
| ಸಾಕ್ಷಿಯ ಹೆಸರು | ಕೆ.ಆರ್. ಪ್ರಸಾದ್ |
| ತಂದೆ/ಗಂಡನ ಹೆಸರು | ರಂಗಪ್ಪ |
| ವಯಸ್ಸು | 47 ವರ್ಷ |
| ಉದ್ಯೋಗ | ಪಿ.ಐ, ಲಸ್ಕರ್ ಪೋಲಿಸ್ ಠಾಣೆ, ಮೈಸೂರು |
| ವಿಳಾಸ | ಮೈಸೂರು |

ಸಾಕ್ಷಿಗೆ ದಿನಾಂಕ **07.03.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ನಾನು ದಿ.**07.09.2012** ರಿಂದ **30.09.2013** ವರೆಗೆ ಶ್ರೀರಂಗಪಟ್ಟಣ ವೃತ್ತದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **27.10.2012** ರಂದು ನಾನು ಬಕ್ರೀದ್ ಹಬ್ಬದ ಸಂಬಂಧ ಬಂದೋಬಸ್ತ್ ಕರ್ತವ್ಯದಲ್ಲಿದ್ದು ಗಸ್ತಿನಲ್ಲಿರುವಾಗ ಶ್ರೀರಂಗಪಟ್ಟಣದ ಮೈ-ಬೆಂಗಳೂರು ರಾಜ್ಯ ಹೆದ್ದಾರಿ ರಸ್ತೆಯ ಪಕ್ಕದಲ್ಲಿರುವ ಶಾರದ ಡಾಬಾದ ರೂಮಿನಲ್ಲಿ ಅನೈತಿಕವಾಗಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂದು ಮ.**2.00** ಗಂಟೆ ಸಮಯದಲ್ಲಿ ಬಂದ ಮಾಹಿತಿ ಮೇರೆಗೆ ಈ ಸಂಬಂಧ ಸದರಿ ಸ್ಥಳದಲ್ಲಿ ದಾಳಿ ಮಾಡಿ ಪರಿಶೀಲಿಸಲು ಮಾನ್ಯ ಡಿ.ವೈ.ಎಸ್.ಪಿ ರವರಿಂದ ಅನುಮತಿಯನ್ನು ಪಡೆದುಕೊಂಡು ಪಂಚರಾದ ಚಾ ಸಾ **2** ಮತ್ತು **3** ರವರು ಹಾಗೂ ಸಿಬ್ಬಂದಿಗಳಾದ ಚಾ ಸಾ **4** ರಿಂದ **9** ರವರೊಂದಿಗೆ ಮತ್ತು ಚಾ ಸಾ **14** ರವರನ್ನು ಕರೆದುಕೊಂಡು ಕೆಎ-**11** ಜಿ-**413** ಇಲಾಖಾ ವಾಹನ ಮತ್ತು ಕೆಎ-**11**-ಜಿ-**237** ಇಲಾಖಾ ಜೀಪಿನಲ್ಲಿ ಮೇಲ್ಕಂಡ ಶಾರದಾ ಡಾಬಾದ ಹತ್ತಿರ ಮ.**2.30** ಗಂಟೆಗೆ ಹೋಗಿದ್ದು ನಮ್ಮನ್ನು ನೋಡಿದ ಒಬ್ಬ ವ್ಯಕ್ತಿ ಶಾರದಾ ಡಾಬಾದ ಆವರಣದಿಂದ ಓಡಿ ಹೋಗಿರುತ್ತಾನೆ. ನಂತರ ಶಾರದಾ ಡಾಬಾದ ಒಳಗಡೆ ರೂಮನ್ನು ಪರಿಶೀಲಿಸಲಾಗಿ ಅಲ್ಲಿದ್ದ ಎಲ್ಲಾ ರೂಂಗಳ ಬಾಗಿಲುಗಳು ತೆರೆದಿದ್ದು ರೂಂ.ನಂ.**106** ಮತ್ತು **110** ರೂಂಗಳ ಬಾಗಿಲುಗಳು ಬಾಗಿಲು ಹಾಕಿದ್ದು ಮೇಲ್ಕಂಡ ಪಂಚರ ಸಮಕ್ಷಮ ರೂಂ.**106** ರ ಹತ್ತಿರ ಹೋಗಿ ಬೋಲ್ಟನ್ನು ತೆಗೆಯಿಸಿ ನೋಡಲಾಗಿ ಒಳಗಡೆ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಅರಬೆತ್ತಲಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದು

ಅವರುಗಳಿಗೆ ಬಟ್ಟೆಯನ್ನು ಧರಿಸಿಕೊಳ್ಳುವಂತೆ ಸೂಚಿಸಿ ನಂತರ ಗಂಡಸನ್ನು ವಿಚಾರಿಸಲಾಗಿ ನನ್ನ ಹೆಸರು ಶಿವಲಿಂಗೇಗೌಡ ಬಿನ್ ಸಣ್ಣಕರೀಗೌಡ, ಕೆಂಬತ್ತೂರು ಗ್ರಾಮ, ಮಳವಳ್ಳಿ ತಾಲ್ಲೂಕು ಎಂದು ತಿಳಿಸಿದ್ದು, ಆತನ ಹತ್ತಿರ ಇದ್ದ ರೂ.520/- ಹಾಗೂ ಒಂದು ಕಪ್ಪು ಬಣ್ಣದ ನೋಕಿಯಾ ಮೊಬೈಲನ್ನು ವಶಪಡಿಸಿಕೊಂಡಿರುತ್ತೇನೆ. ಆತನ ಜೊತೆಯಲ್ಲಿದ್ದ ಮಹಿಳೆಯನ್ನು ಚಾ ಸಾ 7 ರವರು ವಿಚಾರಿಸಲಾಗಿ ಆಕೆ ತನ್ನ ಹೆಸರು ಶಿವಮ್ಮ ಬಿನ್ ಲೇ.ಬಿಲ್ಲಯ್ಯ, ಕೆಂಬತ್ತೂರು ಗ್ರಾಮ, ಮಳವಳ್ಳಿ ತಾಲ್ಲೂಕು ಎಂದು ತಿಳಿಸಿದ್ದು, ಸದರಿ ಶಿವಲಿಂಗಯ್ಯರವರು ನನ್ನನ್ನು ದುಡ್ಡು ಕೊಡುತ್ತೇನೆಂದು ಲೈಂಗಿಕ ಕ್ರಿಯೆಗೆ ಕರೆದುಕೊಂಡು ಬಂದಿರುವುದಾಗಿ ತಿಳಿಸಿದರು. ನಂತರ ರೂಂ.110 ನ ಬಾಗಿಲು ತೆಗೆಯಿಸಿ ನೋಡಲಾಗಿ ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸು ಅರಬೆತ್ತಲಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ್ದು ಅವರುಗಳಿಗೆ ಬಟ್ಟೆಯನ್ನು ಧರಿಸಿಕೊಳ್ಳುವಂತೆ ಸೂಚಿಸಿ ನಂತರ ಗಂಡಸನ್ನು ವಿಚಾರಿಸಲಾಗಿ ನನ್ನ ಹೆಸರು ಲೋಕೇಶ ಬಿನ್ ವೆಂಕಟೇಶ, ಅಂಚೆಪಾಳ್ಯ, ಚಲ್ಲಘಟ್ಟ, ಬೆಂಗಳೂರು ಎಂದು ತಿಳಿಸಿದ್ದು, ಆತನ ಹತ್ತಿರ ಇದ್ದ ರೂ.90/- ಹಾಗೂ ಒಂದು ನೋಕಿಯಾ ಮೊಬೈಲನ್ನು ವಶಪಡಿಸಿಕೊಂಡಿರುತ್ತೇನೆ. ನಂತರ ಮಹಿಳಾ ಸಿಬ್ಬಂದಿ ಚಾ ಸಾ 7 ರವರ ಮುಖಾಂತರ ಒಳಗಡೆ ಇದ್ದ ಮಹಿಳೆಯನ್ನು ವಿಚಾರಿಸಲಾಗಿ ನನ್ನ ಹೆಸರು ಶುಭಾ ಕೋಂ ಶೇಕರ, ಅಗ್ರಿ ಗೋಲ್ಡ್ ಏಜೆಂಟ್, ಬಸವಪಟ್ಟಣ, ರಾಮನಾಥಪುರಂ, ಅರಕಲಗೂಡು ತಾಲ್ಲೂಕು ಎಂದು ತಿಳಿಸಿದ್ದು ಸದರಿ ಮಹಿಳೆಯು ಆರೋಪಿಯಾದ ಲೋಕೇಶ ಈತನು ರೂ.600/- ದುಡ್ಡು ಕೊಟ್ಟು ನನ್ನನ್ನು ಲೈಂಗಿಕ ಕ್ರಿಯೆಗೆ ಕರೆದುಕೊಂಡು ಬಂದಿರುವುದಾಗಿ ತಿಳಿಸಿದರು. ಸದರಿ ರೂಮನ್ನು ಪರಿಶೀಲಿಸಲಾಗಿ 2 ಉಪಯೋಗಿಸದ ಕಾಂಡೋಮ್ ಗಳು ಇದ್ದು ವಶಕ್ಕೆ ಪಡೆದುಕೊಂಡಿರುತ್ತೇನೆ. ನಂತರ ಓಡಿ ಹೋದ ವ್ಯಕ್ತಿಯನ್ನು ಯಾರು ಎಂದು ವಿಚಾರಿಸಲಾಗಿ ಸದರಿ ಶಾರದಾ ಡಾಬಾ ವನ್ನು ನಡೆಸುತ್ತಿರುವ ಮಾಲೀಕರಾದ ರಮೇಶ್ ಬಿನ್ ನಾಗರಾಜು ಎಂದು ತಿಳಿದುಬಂತು. ಸದರಿ ಶಾರದಾ ಡಾಬಾದ ರೂಮಿನಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆ ಚಟುವಟಿಕೆ ಕಂಡು ಬಂದಿದ್ದರಿಂದ ಮೇಲ್ಕಂಡ ಆರೋಪಿತರನ್ನು ವಶಕ್ಕೆ ಪಡೆದುಕೊಂಡು ಪಂಚರ ಸಮಕ್ಷಮ 2.30-3.00 ಗಂಟೆ ವರೆಗೆ ಮಹಜರ್ ಕ್ರಮ ಜರುಗಿಸಿ ಆರೋಪಿತರಿಂದ ವಶಪಡಿಸಿಕೊಂಡ 2 ಮೊಬೈಲ್ ಗಳು, 2 ಉಪಯೋಗಿಸದ ಕಾಂಡೋಮ್ ಗಳು ಮತ್ತು ಒಟ್ಟು ಸ್ಥಳದಲ್ಲಿ ದೊರೆತ ರೂ.1210/- ಗಳನ್ನು ಮಹಜರ್ ಮುಖೇನ ವಶಪಡಿಸಿಕೊಂಡಿರುತ್ತೇನೆ. ನಂತರ ಮೇಲ್ಕಂಡ ಆರೋಪಿತರು ಮತ್ತು ಮಾಲುಗಳೊಂದಿಗೆ ಹಾಗೂ ನೊಂದ ಮಹಿಳೆಯರಾದ ಚಾ ಸಾ 10 ಮತ್ತು 11 ರವರೊಂದಿಗೆ ಠಾಣೆಗೆ ಬಂದು ಸ್ವಯಂ ದೂರನ್ನು

ತಯಾರಿಸಿ ಅಕ್ರಮವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದರಿಂದ ಸದರಿಯವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಚಾ ಸಾ 13 ರವರಿಗೆ ನೀಡಿರುತ್ತೇನೆ.

ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 1 ಡಿ ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2 ಎ ಎಂದು ಗುರತಿಸಲಾಯಿತು. ಸಾಕ್ಷಿ ಮು ಮಾ 1 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ.

ನಂತರ ಕಡತವನ್ನು ಚಾ ಸಾ 13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಅದೇದಿನ ದಿ. **27.10.2012** ರಂದು ಪಂಚರಾದ ಚಾ ಸಾ 2 ರಿಂದ 9 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. 3 ನೇ ಆರೋಪಿಯನ್ನು ಪತ್ತೆ ಹಚ್ಚುವಂತೆ ಸಿಬ್ಬಂದಿ ನೇಮಕ ಮಾಡಿ ಸೂಚಿಸಿರುತ್ತೇನೆ. ದಿ. **04.11.2012** ರಂದು ಶಾರದಾ ಡಾಬಾಕ್ಕೆ ಉದ್ದಿಮೆ ಪರವಾನಗಿ ದಾಖಲೆ ನೀಡುವಂತೆ ಚಾ ಸಾ 12 ರವರಿಗೆ ನೀವೇದನೆ ಮೂಲಕ ಕೋರಿರುತ್ತೇನೆ. ದಿ. **20.11.2012** ರಂದು ಶಾರದಾ ಡಾಬಾದ ಉದ್ದಿಮೆ ಪರವಾನಗಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡರುತ್ತೇನೆ.

ಸಾಕ್ಷಿ ಉದ್ದಿಮೆ ಪರವಾನಗಿ ಪತ್ರಗಳ ದೃಡೀಕೃತ ನಕಲುಗಳನ್ನು ನೋಡಿ ಗುರುತಿಸಿದ್ದು ನಿಪಿ 3 ಮತ್ತು 4 ಎಂದು, ಸಾಕ್ಷಿಗಳನ್ನು ನಿಪಿ 3 ಎ ಮತ್ತು ನಿಪಿ 4 ಎ ಎಂದು ಗುರುತಿಸಲಾಯಿತು. ಸಾಕ್ಷಿ ಡಿಮ್ಯಾಂಡ್ ರಿಜಿಸ್ಟರನ್ನು ನೋಡಿ ಗುರುತಿಸಿದ್ದು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ದಿ. **30.11.2012** ರಂದು ತನಿಖೆಯನ್ನು ಪೂರ್ಣಗೊಳಿಸಿದ್ದು ಆರೋಪಿತರ ವಿರುದ್ದ ಆರೋಪ ಸಾಬೀತಾದ ಕಾರಣ ಮಾನ್ಯ ಘನ ನ್ಯಾ.ಕ್ಕೆ ದೋ.ಪಟ್ಟಿಯನ್ನು ಸಲ್ಲಿಸಿಕೊಂಡಿರುತ್ತೇನೆ.

<u>ಪಾಟೀಸವಾಲುಃ ಆರೋಪಿತರಪರ ವಕೀಲರಿಂದ</u>

ನನಗೆ ಮಾಹಿತಿ ಸುಮಾರು 2.00 ಗಂಟೆಗೆ ಬಂದಿರುತ್ತದೆ. ನಾನು 2.30 ರ ವೇಳೆಗೆ ಡಿ.ವೈ.ಎಸ್.ಪಿ ರವರ ಅನುಮತಿ ಪಡೆದಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಾನು 2.30 ರ ವೇಳೆಗೆ ಡಿ.ವೈ.ಎಸ್.ಪಿ ರವರ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ಓಡಿಹೋದ ವ್ಯಕ್ತಿಯನ್ನು ಹಿಡಿಯಲು ಆಗಿರುವುದಿಲ್ಲ ತಪ್ಪಿಸಿಕೊಂಡಿರುತ್ತಾನೆ. ಮಹಜರ್ ಪಂಚರಿಗೆ ನಾನು ನೋಟೀಸ್ ನೀಡಿರುವುದಿಲ್ಲ. ನಾನು ಮಹಜರ್ ನಲ್ಲಿ ಆರೋಪಿತರಿಂದ ವಶಪಡಿಸಿಕೊಂಡ ನೋಟುಗಳ ಸಂಖ್ಯೆ, ತಯಾರಿಕಾ ವರ್ಷ

ಹಾಗೂ ಕಾಂಡೋಮ್ ನ ಕಂಪನಿ ಹಾಗೂ ತಯಾರಿಕಾ ದಿನಾಂಕ, ವರ್ಷ ನಮೂದಿಸಿಲ್ಲ. ಯಾವುದೇ ಲಾಡ್ಜ್ ಗಳಲ್ಲಿ ಗ್ರಾಹಕರ ನೊಂದಣಿ ರಿಜಿಸ್ಟರ್ ನಿರ್ವಹಿಸಿರುತ್ತಾರೆ ಎಂದರೆ ಸರಿ, ಈ ಪ್ರಕರಣದಲ್ಲಿ ಗ್ರಾಹಕರ ನೊಂದಣಿ ಪುಸ್ತಕ ನಿರ್ವಹಿಸಿಲ್ಲದೆ ಇರುವ ಬಗ್ಗೆ ಮಹಜರ್ ನಲ್ಲಿ ನಮೂದಿಸಿಲ್ಲ. ದಾಳಿಯಲ್ಲಿ ಭಾಗವಹಿಸಿದ್ದಾರೆ ಎನ್ನುವ ಸಿಬ್ಬಂದಿಗಳು ನನ್ನ ಅಧೀನ ಸಿಬ್ಬಂದಿಗಳು ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಪಿರ್ಯಾದಿ/ತನಿಖಾಧಿಕಾರಿಯಾಗಿರುತ್ತೇನೆ ಎಂದರೆ ಸರಿ. ನಾನು ಮೇಲಾಧಿಕಾರಿಗಳಿಂದ ಈ ಬಗ್ಗೆ ಯಾವುದೇ ಲಿಖಿತ ಆದೇಶ ಪಡೆದಿರುವುದಿಲ್ಲ, ಮೌಖಿಕ ಆದೇಶ ಪಡೆದುಕೊಂಡಿರುತ್ತೇನೆ. ನಾನು ಮೌಖಿಕ ಆದೇಶ ಪಡೆದುಕೊಂಡಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಯಾರು ಬರೆದಿರುತ್ತಾರೆ ಎಂದು ನಮೂದಿಸಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಯಾವ ಕಲಂ ಗಳ ಅಡಿಯಲ್ಲಿ ಅಪರಾಧ ಎಸೆಗಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಾನು ಹಿರಿಯ ಅಧಿಕಾರಿಯಾಗಿದ್ದರಿಂದ ಠಾಣಾಧಿಕಾರಿಗೆ ಒತ್ತಡ ಹೇರಿ ಪ್ರಕರಣ ದಾಖಲು ಮಾಡಲು ಸೂಚಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಹಜರ್ ಕ್ರಮ ಜರುಗಿಸಿ ಸಾಕ್ಷಿಗಳ ಹೇಳಿಕೆ ಪಡೆದುಕೊಂಡಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಪರವಾನಗಿ ಉದ್ದೇಶ ನವೀಕರಣ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಠಾಣಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ದೋ.ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮು ಮಾ ಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಡಿ.ವೈ.ಎಸ್.ಪಿ ರವರ ರಿಂದ ಬೆ.11.30 ಕ್ಕೆ ಅನುಮತಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನೊಂದ ಚಾ ಸಾ 10 ಮತ್ತು 11 ರವರನ್ನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳಹಿಸಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಾನು ಶಾರಾದ ಡಾಬಾದ ಮೇಲೆ ಯಾವುದೇ ದಾಳಿ ಮಾಡಿಲ್ಲ, ಆರೋಪಿತರು ಯಾವುದೇ ಅಪರಾಧ ಮಾಡದ ಇದ್ದರು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ತನಿಖೆ ನಡೆಸಿ, ಸುಳ್ಳು ದೋ.ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ